International Journal of Kannada Research 2023; 9(3): 156-158

International Journal of Kannada Research
www.kannadajournal.com

ISSN: 2454–5813
IJKR 2023; 9(3): 156-158
© 2023 IJKR
www.kannadajournal.com
Received: 20-05-2023
Accepted: 25-06-2023

**ಡಾ. ಬಸವರಾಜ ಮ. ಜನಗೌಡ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕೆ.ಎಲ್.ಇ. ಸಂಸ್ಥೆಯ, ಜಿ.ಆಯ್.ಬಾಗೇವಾಡಿ ಕಲಾ, ವಿಜ್ಞಾನ ಹಾಗೂ, ವಾಣಿಜ್ಯ ಮಹಾವಿದ್ಯಾಲಯ, ನಿಪ್ಪಾಣಿ, ಜಿಲ್ಲೆ: ಬೆಳಗಾವಿ, ಕರ್ನಾಟಕ, ಭಾರತ

**Corresponding Author:**
**ಡಾ. ಬಸವರಾಜ ಮ. ಜನಗೌಡ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕೆ.ಎಲ್.ಇ. ಸಂಸ್ಥೆಯ, ಜಿ.ಆಯ್.ಬಾಗೇವಾಡಿ ಕಲಾ, ವಿಜ್ಞಾನ ಹಾಗೂ, ವಾಣಿಜ್ಯ ಮಹಾವಿದ್ಯಾಲಯ, ನಿಪ್ಪಾಣಿ, ಜಿಲ್ಲೆ: ಬೆಳಗಾವಿ, ಕರ್ನಾಟಕ, ಭಾರತ

# ಕನ್ನಡ ಮತ್ತು ಮಾಹಿತಿ ತಂತ್ರಜ್ಞಾನ ಒಂದು ಅವಲೋಕನ

**ಡಾ. ಬಸವರಾಜ ಮ. ಜನಗೌಡ**

**ಪೀಠಿಕೆ**

ಇಂದಿನ ಆಧುನಿಕ ಯುಗದಲ್ಲಿ ಸಾಮಾನ್ಯವಾಗಿ ಸಂವಹನವು ಮಾತು, ಬರಹ, ಇಲ್ಲವೆ ಸಂಜ್ಞೆಯ ಮೂಲಕ ಮಾಹಿತಿ, ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳುವುದಾಗಿದೆ. ಏಕ ಮುಖೀಯ ಸಂಪರ್ಕದ ವೇಳೆಯಲ್ಲೂ ಸಹ, ಪರಸ್ಪರ ಅಂಗೀಕರಿಸಿದ ಗುರಿ, ದಿಕ್ಕಿನೆಡೆಗೆ ಭಾವನೆ, ವಿಚಾರಗಳು, ಅನಿಸಿಕೆ, ಅಭಿಪ್ರಾಯಗಳ ವಿನಿಮಯವಾಗಿದೆ. ಇದು ಪ್ರಗತಿಯಲ್ಲಿರುವ ದ್ವಿಮುಖ ಮಾರ್ಗ ಪ್ರಕ್ರಿಯೆಯಿಂದ ಸಂವಹನವನ್ನು ಉತ್ತಮಪಡಿಸಿ ಗ್ರಹಿಸಬಹುದಾಗಿದೆ.

ತಂತ್ರಜ್ಞಾನದ ಬಳಕೆಯಿಂದ ಸಂವಹನ ಇಂದು ಅತ್ಯಂತ ಸುಲಭವಾಗಿದೆ. ಮೊಬೈಲ್, ದೂರವಾಣಿಯಂತಹ ಅನನ್ಯ ಸಾಧನಗಳನ್ನು ಪರಿಚಯಿಸಲಾಗಿದೆ. ಇವುಗಳ ಸಹಾಯದಿಂದ ಜನರು ಎಷ್ಟೂ ದೂರದಲ್ಲಿದ್ದರು ಒಬ್ಬರನ್ನೊಬ್ಬರು ಸಂಪರ್ಕ ಮಾಡಲು ಸುಲಭವಾಗಿದೆ. ಸಂಪರ್ಕಗಳನ್ನು, ಫೋಟೋಗಳನ್ನು, ವೀಡಿಯೊಗಳನ್ನು, ಕಡತಗಳನ್ನು ಸಾಮಾಜಿಕ ನೆಟ್ವರ್ಕಿಂಗ್ ಸೈಟ್‌ಗಳ ಮೂಲಕ ಹಂಚಿಕೊಳ್ಳಬಹುದಾಗಿದೆ. ದೂರವಾಣಿ ಸಂಪರ್ಕ ಸುಲಭವಾದ ಮಾರ್ಗವಾಗಿದೆ, ವೇಗವಾಗಿ ಸಮೂಹ ಜನಪ್ರಿಯತೆಯನ್ನು ಪಡೆಯುತ್ತಿದೆ.

ಅದೇ ರೀತಿ ಪತ್ರಿಕೆಯಲ್ಲಿ ಸುದ್ದಿಯನ್ನು ಅಕ್ಷರಗಳ ಮೂಲಕ ಓದುತ್ತೇವೆ. ಟಿ.ವಿ.ವಾಹಿನಿಗಳಲ್ಲಿ ದೃಶ್ಯಗಳ ಮೂಲಕ ನೋಡುತ್ತೇವೆ. ಆದರೆ ಅಂತರಜಾಲದಲ್ಲಿ ದೃಶ್ಯ ಮತ್ತು ಶ್ರವ್ಯ ಎರಡನ್ನೂ ಪಡೆಯಬಹುದು. ಶಬ್ದವನ್ನು ಸೇರಿಸಬಹುದು, ದೃಶ್ಯಗಳನ್ನು ಹಾಕಬಹುದು. ರೇಡಿಯೋ, ಟಿ.ವಿ. ಸಿನಿಮಾ ಈ ಮೂರು ಮಾಧ್ಯಮಗಳ ತ್ರಿವೇಣಿ ಸಂಗಮ ಈ ಅಂತರಜಾಲ. ಸಂವಹನ ಕ್ಷೇತ್ರದಲ್ಲಿಯೂ ಸಾಕಷ್ಟು ಬದಲಾವಣೆಗಳಾಗಿವೆ.

ಕನ್ನಡ ಸಾಹಿತ್ಯದ ಮೇಲೆ ಇಂದು ತಂತ್ರಜ್ಞಾನದ ಬೆಳವಣಿಗೆಯ ಪ್ರಭಾವ ಮತ್ತು ತಂತ್ರಾಂಶಗಳ ಬಳಕೆಯ ಕುರಿತು ತಿಳಿಯುವುದು ಮಹತ್ವದ್ದಾಗಿದೆ. ಮತ್ತು ಅತ್ಯವಶ್ಯವಾಗಿದೆ. ಇಲ್ಲದೇ ಹೋದಲ್ಲಿ ಜಗತ್ತು 'ವಿದ್ಯಾವಂತ ಅಶಿಕ್ಷಿತ' ಎಂಬ ಹೊಸ ವಿಭಜನೆ ಮಾಡುತ್ತದೆ.

ಗಣಕದಲ್ಲಿ ಕನ್ನಡ ಎಂಬುದು ಆರಂಭದ ದಿನಗಳಲ್ಲಿ ಪ್ರಾರಂಭವಾದಾಗ, ಪದಸಂಸ್ಕರಣವು ಇದರಲ್ಲಿಯ ಮೊದಲನೆಯದು. ಪತ್ರ, ಲೇಖನ, ದಾಖಲೆಗಳನ್ನು ಬರೆಯಲು, ತಿದ್ದಲು ಇವುಗಳ ಬಳಕೆ ಆಗುತ್ತಿದೆ. ಪದಸಂಸ್ಕರಣದ ಮುಂದುವರೆದ ಸೌಕರ್ಯವೇ ಡಿ.ಟಿ.ಪಿ. ಅಂದರೆ ಪಠ್ಯದ ಜೊತೆ ಚಿತ್ರಗಳನ್ನು ಸೇರಿಸಿ ಪುಟವಿನ್ಯಾಸ ಮಾಡುವುದು. ಈಗ ಎಲ್ಲ ಪುಸ್ತಕಗಳು ಮತ್ತು ಪತ್ರಿಕೆಗಳು ಇದೇ ವಿಧಾನದಿಂದ ತಯಾರಾಗುತ್ತಿವೆ.

ಕೆ.ಪಿ.ರಾವ್ ಅವರ ಸೇಡಿಯಾಪು ತಂತ್ರಾಂಶ ನೋಡಿದಾಗ ಕನ್ನಡ ಭಾಷೆ ಮಾತ್ರವಲ್ಲ, ಸಮಗ್ರ ಭಾರತೀಯ ಭಾಷೆಗಳನ್ನೇ ಗಣಕದಲ್ಲಿ ಅಳವಡಿಸುವ ವಿಷಯದಲ್ಲಿ ಎಲ್ಲರಿಂದ ಮೊದಲು ಆಲೋಚಿಸಿ ಕಾರ್ಯಗತರಾದವರು ಎಂಬುದು ತಿಳಿಯುತ್ತದೆ. 70ರ ದಶಕದಲ್ಲಿ ಅವರು ಮುಂಬಯಿಯ ಟಾಟಾ ಪ್ರೆಸ್‌ನಲ್ಲಿ ತಂತ್ರಜ್ಞರಾಗಿದ್ದಾಗ ಆ ಕಾಲಕ್ಕೆ ಲಭ್ಯವಿದ್ದ ಸೀಮಿತ ತಂತ್ರಜ್ಞಾನಗಳನ್ನೇ ಅವರು ಬಳಸಿಕೊಂಡು ಸುಂದರವಾದ ಕಂಪ್ಯೂಟರ್ ಅಕ್ಷರಶೈಲಿಗಳು ಕನ್ನಡ ಮತ್ತು ಇತರೆ ಭಾಷೆಗಳಿಗೆ ನೀಡಿದರು. ಅಂತಹ ಕನ್ನಡ ಲಿಪಿಯ ಫಾಂಟ್‌ನ್ನು ಸುಲಭವಾಗಿ ಕಂಪ್ಯೂಟರ್‌ನಲ್ಲಿ ಮೂಡಿಸಲು ಸರಳ ಹಾಗೂ ತರ್ಕಬದ್ಧವಾದ ಕೀಲಿಮಣೆ ವಿನ್ಯಾಸವನ್ನು ರಚಿಸಿದ ಕೀರ್ತಿ ಕೆ.ಪಿ.ರಾವ್ ಅವರದು. ಇಂಗ್ಲಿಷ್ ಭಾಷೆಯ 26 ಅಕ್ಷರಗಳನ್ನು ಮಾತ್ರವೇ ಬಳಸಿ ಕನ್ನಡದ ಎಲ್ಲ ಅಕ್ಷರಗಳನ್ನು ಮೂಡಿಸುವಂತೆ ಅವರು ತಮ್ಮ ಕೀಲಿಮಣೆಯ ವಿನ್ಯಾಸ ರೂಪಿಸಿದರು.

ಹಲವು ವರ್ಷಗಳಿಂದ ಕನ್ನಡ ಭಾಷೆಯ ಡಿ.ಟಿ.ಪಿ. ತಂತ್ರಾಂಶಗಳನ್ನು ತಯಾರಿಸಿ ಮಾರುತ್ತಿದ್ದ ಎಲ್ಲ ಕಂಪೆನಿಗಳು ತಾವು ಬಳಸಿರುವ ಅಕ್ಷರ ಭಾಗಗಳಿಗೆ ತಮ್ಮದೇ ಸಂಕೇತವನ್ನು ರೂಪಿಸಿಕೊಂಡಿದ್ದರು. ಇವುಗಳಲ್ಲಿ ಒಮ್ಮತವಿರಲಿಲ್ಲ. ಇದರಿಂದಾಗಿ ಒಂದು ತಂತ್ರಾಂಶವನ್ನು ಬಳಸಿ ತಯಾರಿಸಿದ ಮಾಹಿತಿಯನ್ನು ಇನ್ನೊಂದು ತಂತ್ರಾಂಶದಲ್ಲಿ ಓದಲು ಆಗುತ್ತಿರಲಿಲ್ಲ. ಈ ಸಮಸ್ಯೆಯನ್ನು ಮನಗಂಡ ಕರ್ನಾಟಕ ಸರಕಾರವು ಗಣಕಗಳಲ್ಲಿ ಕನ್ನಡ ಬಾಷೆಯ ಅಳವಡಿಕೆಗೆ ಒಂದು ಶಿಷ್ಟತೆಯನ್ನು ರೂಪಿಸಲು ಸಮಿತಿಯೊಂದನ್ನು ರಚಿಸಿತು. ಈ ಸಮಿತಿಯು ಕನ್ನಡದ ಅಕ್ಷರಭಾಗಗಳಿಗೆ ಒಂದು ಶಿಷ್ಟ ಸಂಕೇತ ಹಾಗು ಕೀಲಿಮಣೆ ವಿನ್ಯಾಸವನ್ನು ಸಿದ್ಧಪಡಿಸಿತು. ಸರಕಾರದ ಈ ಶಿಷ್ಟತೆಗಳಿಗನುಗುಣವಾಗಿ ಸರಕಾರವೇ ಕನ್ನಡ ಗಣಕ ಪರಿಷತ್ತಿನ ಸಹಯೋಗದಿಂದ "ನುಡಿ" ಹೆಸರಿನ ಸಮಾನ ತಂತ್ರಾಂಶವೊಂದನ್ನು ತಯಾರಿಸಿ ಬಿಡುಗಡೆ ಮಾಡಿತು (2000).

**ಮಾಹಿತಿ ಹೆದ್ದಾರಿಯಾದ ಕನ್ನಡ**

ಅಂತರಜಾಲಕ್ಕೆ ಮಾಹಿತಿ ಹೆದ್ದಾರಿ (ಇನ್‌ಫೊರ್ಮೇಶನ್ ಸೂಪರ್ ಹೈವೇ) ಎಂಬ ಹೆಸರೂ ಇದೆ. ಈ ಮಾಹಿತಿ ಹೆದ್ದಾರಿಯಲ್ಲಿ ಕನ್ನಡದ ಗಾಡಿಗಳ ಪಯಣದ ಬಗ್ಗೆ ಒಂದು ಪಕ್ಷಿನೋಟ. ಅಂತರಜಾಲದಲ್ಲಿ ಕನ್ನಡದ ಬಗ್ಗೆ ಬರೆಯುವಾಗ ದತ್ತಾತ್ರೇಯ ಕುಲಕರ್ಣಿಯವರ "ಕನ್ನಡ ಸಾಹಿತ್ಯ ಪುಟ"ದಿಂದ ಆರಂಭಿಸಬೇಕು. ಸುಮಾರು 1994–95ರಲ್ಲಿ ಕೆನಡಾದಲ್ಲಿ ವಿದ್ಯಾರ್ಥಿಯಾಗಿದ್ದ ಧಾರವಾಡದ ಕುಲಕರ್ಣಿಯವರು ಬಿಡುವಿನ ವೇಳೆಯಲ್ಲಿ ಪ್ರಾರಂಭಿಸಿದ್ದು ಕನ್ನಡ ಸಾಹಿತ್ಯ ಪುಟ. ಇದರಲ್ಲಿ ಕನ್ನಡ ಹಾಸ್ಯ, ಭಾವಗೀತೆ, ಭಕ್ತಿಗೀತೆ, ಪುಸ್ತಕಗಳ ಪಟ್ಟಿ, ಧ್ವನಿಸುರುಳಿಗಳ ಪಟ್ಟಿ, ಇತ್ಯಾದಿಗಳಿವೆ. ಕನ್ನಡ ಕಲಿಯಲು ಸಹಕಾರಿಯಾಗುವ ಒಂದೆರೆಡು ತಂತ್ರಾಂಶಗಳೂ ಇದ್ದವು. ಆದರೆ ಈ ತಾಣದಲ್ಲಿ ಎಲ್ಲ ಮಾಹಿತಿಗಳು ಇಂಗ್ಲಿಷ್ ಲಿಪಿಯಲ್ಲಿದ್ದವು. ಇಂಗ್ಲಿಷ್ ಭಾಷೆಯ ದೊಡ್ಡ ಮತ್ತು ಚಿಕ್ಕ ಅಕ್ಷರಗಳನ್ನು ಜಾಣ್ಮೆಯಿಂದ ಕನ್ನಡಕ್ಕೆ ಬಳಸಿಕೊಂಡದ್ದು ಇಲ್ಲಿನ ವಿಶೇಷ. ಉದಾಹರಣೆಗೆ ಕನ್ನಡ ಹಾಸ್ಯ ವಿಭಾಗದಲ್ಲಿನ ಒಂದು ತುಣುಕು: ಕಿ: Ramanu Maradhindha Kelage Bidhdhanu, Idhu Yava Kala? A: Ramanige Ketta Kala (ಪ್ರ: ರಾಮನು ಮರದಿಂದ ಕೆಳಗೆ ಬಿದ್ದನು. ಇದು ಯಾವ ಕಾಲ? ಉ: ರಾಮನಿಗೆ ಕೆಟ್ಟ ಕಾಲ.)

ಕುಲಕರ್ಣಿಯವರು ಈ ತಾಣ ನಿರ್ಮಿಸಿದ ಕಾಲದಲ್ಲಿ ಅಂತರಜಾಲದಲ್ಲಿ ಕನ್ನಡ ಅಕ್ಷರಗಳ ಬಳಕೆ ಪ್ರಾರಂಭವಾಗಿರಲಿಲ್ಲ. ಆದರೂ ಕೆಲವು ಶಬ್ದಗಳನ್ನು, ಗುಂಡಿಗಳನ್ನು ಕನ್ನಡ ಲಿಪಿಯಲ್ಲಿ ಚಿತ್ರ ರೂಪದಲ್ಲಿ (ಗ್ರಾಫಿಕ್ಸ್) ಅವರು ಬಳಸಿದ್ದರು. ಅಂತರಜಾಲದಲ್ಲಿ ಕನ್ನಡ ಬಳಕೆ ಆರಂಭವಾದುದು 1996ರ ಡಿಸೆಂಬರ ತಿಂಗಳಲ್ಲಿ. ಡಾ.ಯು.ಬಿ.ಪವನಜ ಪ್ರಾರಂಭಿಸಿದ "ವಿಶ್ವ ಕನ್ನಡ" (www.vishvakannada.com) ಕನ್ನಡದ ಪ್ರಥಮ ಅಂತರಜಾಲ ಪತ್ರಿಕೆ. ಅವರು ಅದನ್ನು ಕನ್ನಡ ನಾಡಿನಿಂದ ದೂರ ಮುಂಬಯಿಯಲ್ಲಿ ಕುಳಿತು ಆರಂಭಿಸಿದರು. ಸುಮಾರು ಅದೇ ಸಮಯಕ್ಕೆ ಬೆಂಗಳೂರಿನಲ್ಲಿರುವ ಶ್ರೀ ಮುರಳೀಧರ ಪದಕಿ ಅವರೂ ತಮ್ಮದೊಂದು ಕನ್ನಡ ತಾಣ ನಿರ್ಮಿಸಿ ಅದರಲ್ಲಿ ಇತರ ಪತ್ರಿಕೆಗಳಿಂದ ಆರಿಸಿದ ಮುಖ್ಯ ಸುದ್ದಿಗಳನ್ನು ಪ್ರಕಟಿಸಲು ತೊಡಗಿದರು. ಅದೇ ತಿಂಗಳಲ್ಲಿ ಬೆಂಗಳೂರಿನ ಸಂಜೆ ಪತ್ರಿಕೆ "ಸಂಜೆವಾಣಿ"ಯೂ ಚಿತ್ರರೂಪದಲ್ಲಿ ಅಂತರಜಾಲವನ್ನು ಸೇರಿತು. ಈಗಂತೂ ನೂರಾರು ಕನ್ನಡ ತಾಣಗಳಿವೆ. ಕನ್ನಡದ ಎಲ್ಲ ಪ್ರಮುಖ ಪತ್ರಿಕೆಗಳೂ ತಮ್ಮ ಅಂತರಜಾಲ ಆವೃತ್ತಿ ನಡೆಸುತ್ತಿವೆ.

**ತಂತ್ರಾಂಶದಲ್ಲಿ ಕನ್ನಡ**

ಲಿನಕ್ಸ್ ಒಂದು ಮುಕ್ತ ತಂತ್ರಾಂಶ. ಅಂದರೆ ಇದನ್ನು ಯಾರು ಬೇಕಾದರೂ ಉಚಿತವಾಗಿ ಪಡೆದು ಬಳಸಬಹುದು ಮಾತ್ರವಲ್ಲ ಸುಧಾರಣೆಯನ್ನೂ ಮಾಡಬಹುದು. ಲಿನಕ್ಸ್‌ನ ಹಲವು ಆವೃತ್ತಿಗಳು ಲಭ್ಯವಿವೆ. ಸದ್ಯ ತುಂಬ ಜನಪ್ರಿಯವಾಗಿರುವುದು ಉಂಟು. ಇದರಲ್ಲಿ ಕನ್ನಡದ ಅಳವಡಿಕೆ ಆಗಿದೆ. ಇದೂ ಸಾಧ್ಯವಾಗಿರುವುದು ಯುನಿಕೋಡ್‌ನಿಂದ. ಕನ್ನಡದ ಕೀಲಿಮಣೆಯೂ ಲಭ್ಯವಿದೆ. ಆಫೀಸ್ ತಂತ್ರಾಂಶ ಬೇಕಾದವರು ಲಿಬ್ರೆ ಆಫೀಸ್‌ನ ಲಿನಕ್ಸ್ ಆವೃತ್ತಿಯನ್ನು ಬಳಸಬಹುದು. ಇದು ಕೂಡ ಒಂದು ಮುಕ್ತ ತಂತ್ರಾಂಶವಾಗಿದೆ. ಲಿಬ್ರೆ ಆಫೀಸ್‌ನಲ್ಲಿ ಕನ್ನಡದ ತೋರಿಕೆಯಲ್ಲಿ (ರೆಂಡರಿಂಗ್) ಕೆಲವು ಸಣ್ಣಪುಟ್ಟ ದೋಷಗಳಿದ್ದವು. ಅವನ್ನು ಆವೃತ್ತಿ 4.3ರಲ್ಲಿ ಸರಿಪಡಿಸಲಾಗಿದೆ.

**ನವಮೌಖಿಕತೆ**

ಇಂದು ಜನಪದ ಹಾಡುಗಳ ಧಾಟಿಯಲ್ಲಿ ಸಿನೆಮಾ ಹಾಡುಗಳು ತಯಾರಾಗುತ್ತಿವೆ. ಹಾಗೆಯೇ ಸಿನಿಮಾ ಹಾಡುಗಳ ಧಾಟಿಯಲ್ಲಿ ಜನಪದ ಗೀತೆಗಳು ರಚನೆಯಾಗಿವೆ. ಇದಕ್ಕೊಂದು ಉದಾಹರಣೆ: ನಿಂಬಿಯ ಬನಾದ ಮ್ಯಾಗಳ ಚಂದ್ರಾಮ ಚಂಡಾಡಿದ. ಇದು ಜನಪದ ಗೀತೆಯಾಗಿದ್ದರು ಇಂದು ನವಮೌಖಿಕತೆಯನ್ನು ತಲುಪಿದೆ ಎಂದು ತೋರಿಸಲು ಉದಾಹರಣೆ ಅಷ್ಟೇ. ಈ ಗೀತೆ ಸೇವಂತಿ ಸೇವಂತಿ ಚಲನಚಿತ್ರದಲ್ಲಿ ಬಳಕೆಗೊಂಡು ಸಾಕಷ್ಟು ಬದಲಾವಣೆ ಆಗಿದೆ. ಚಲನಚಿತ್ರದಲ್ಲಿ ಈ ಗೀತೆಯನ್ನು ರಮ್ಯ ಗೀತೆಯಾಗಿ ಬಳಸಿಕೊಂಡಿದ್ದಾರೆ. ನೃತ್ಯ, ಭಾವ, ಗೇಯತೆ, ರೂಪ ಎಲ್ಲವೂ ಆಧುನಿಕ ಸಿನಿಮಾ ಗೀತೆಗಳ ಪ್ರತಿರೂಪವಾಗಿದೆ. ಆದರೆ ಬಳಕೆ ಮಾಡಿಕೊಂಡಿರುವ ಗೀತೆ ಮಾತ್ರ ಜನಪದ ಗೀತೆಯಾಗಿದೆ. ಜನಪದದ ಜ್ಞಾನವಿಲ್ಲದವರು ಕೇಳಿದರೆ ಇದು ಚಲನಚಿತ್ರ ಗೀತೆಗಾಗಿಯೆ ಬರೆಯಲಾಗಿದೆ ಎಂದು ಪರಿಭಾವಿಸುವಂತಿದೆ.

ನಾವು ಇಂದು ಈ ಸಮಾಜವನ್ನು ಅವಲೋಕಿಸಿದಾಗ, ಉತ್ತರ ಕರ್ನಾಟಕವಾಗಲಿ, ಕರ್ನಾಟಕವಾಗಲಿ ಅಥವಾ ಭಾರತವೇ ಆಗಲಿ ಸಂಪೂರ್ಣ ಆಧುನಿಕರಣಗೊಂಡಿದೆ ಎಂದು ಹೇಳಲಾಗದು. ಪ್ರಸ್ತುತ ಸ್ಥಿತಿ ಹಳೆಬೇರು ಹೊಸ ಚಿಗುರಿನಂತಿದೆ. ಹಳೆಯ ಮತ್ತು ಹೊಸದರ ಸಂಪರ್ಕದಿಂದ ಪ್ರಾಚೀನ ಮತ್ತು ಆಧುನಿಕತೆಯ ಸಮರೂಪದ ಮಿಶ್ರಣವಾಗಿದೆ. ಉತ್ತರ ಕರ್ನಾಟಕದ ಯಾವುದೇ ದಿಕ್ಕಿಗೆ ಬಹಳೇನಲ್ಲ 5 ರಿಂದ 6 ಕಿ.ಮಿ. ಪ್ರಮಾಣದಲ್ಲಿರುವಾಗ ಸ್ವಲ್ಪ ಸೂಕ್ಷ್ಮವಾಗಿ ಗಮನಿಸಿದರೆ ಸಾಕು ಹಳೆಯ ಕಾಲದ, ಹಳ್ಳಿಗಳ ಆಧುನಿಕ ನಗರಗಳ ಅಪರೂಪದ ಸಂಗಮ ಅನುಭವಕ್ಕೆ ಬರದೇ ಇರದು. ಪ್ರಯಾಣದ ಸಮಯದಲ್ಲಿ ಕುಳಿತು ಸುಮ್ಮನೆ ಸೂಕ್ಷ್ಮವಾಗಿ ಗಮನಿಸುತ್ತ ಹೋದರೆ ಸಾಕು ಹಳ್ಳಿಯ ಬದುಕಿನ ಜೀವನ ಕಾಣಿಸುತ್ತದೆ. ದಾರಿಯುದ್ದಕ್ಕೂ ಕಾಣಸಿಗುವ ಹಳ್ಳಿಗಳು, ರೈತರ ಕಣಗಳು, ದನಗಳಿಗಾಗಿ ಒಟ್ಟಿದ ಹುಲ್ಲಿನ ಬಣವೆಗಳು, ಜೋಳದ ಹೊಲಗಳು, ಅಲ್ಲಿ ಕೆಲಸ ಮಾಡುವ ಬಡ ರೈತರು, ಎಣ್ಣೆ ಕಾಣದ ಅವರ ತಲೆ ಕೂದಲುಗಳು, ಹಂಚಿನ ಮನೆಗಳು, ಮನೆಯ ಮುಂದೆ ಎತ್ತು ಚಕ್ಕಡಿಗಳು, ಡಾಂಬರನ್ನು ಕಾಣದ ಮಣ್ಣಲ್ಲಿ ಮುಳುಗಿದ ರಸ್ತೆಗಳು, ಇತ್ತಿಂದತ್ತ ಓಡಾಡುತ್ತಿರುವ ಕೋಳಿಗಳು, ಪ್ರಾಣಿಗಳಿಗಾಗಿ ಸೊಪ್ಪೆಯ ಹೊರೆಯನ್ನು ಹೊತ್ತು ಮನೆಕಡೆಗೆ ಸಾಗಿರುವ ರೈತರು ಮುಂತಾದವುಗಳು ಹಳೆಯತನವನ್ನು ತೋರಿಸುತ್ತವೆ. ಹಳೆಯದರ ಕುರುಹು ಹಾಗೆಯೇ ಉಳಿದಿವೆ.

ಇದು ಒಂದೆಡೆಯಾದರೆ ಬಸ್ಸಿನಲ್ಲಿ ಕುಳಿತು ಸಹ ಪ್ರಯಾಣಿಕರತ್ತ ಗಮನಿಸಿದರೆ ಆಧುನಿಕತೆಯ ಚಿಹ್ನೆಗಳು ಕಾಣಸಿಗುತ್ತವೆ. ಅರೆಬರೆ ಬಟ್ಟೆಗಳು, ಆಂಡ್ರಾಯ್ಡ್ ಫೋನ್ (Android phone) ಹಿಡಿದುಕೊಂಡು, ವಾಟ್ಸಾಪ್‌ಗೆ (WhatsApp) ಮುಳುಗಿರುವ

ಯುವಕ, ಮೇಲ್ (Mail) ಮಾಡಿ ಎಂದು ಮೊಬೈಲಲ್ಲಿ ಮಾತನಾಡುತ್ತಿರುವ ಮಧ್ಯ ವಯಸ್ಕ, ಟಾರ ರೋಡಗಳು, ಮುಗಿಲೆತ್ತರಕ್ಕೆ ಬೆಳೆದು ನಿಂತ ಬಹು ಮಹಡಿ ಕಟ್ಟಡಗಳು, ಟ್ಯಾಬ್‌ನಲ್ಲಿ (Tab) ಟೈಪ್ (Type) ಮಾಡುತ್ತ ಕುಳಿತ ಮತ್ತೋರ್ವ ಹೀಗೆ ಇವೆಲ್ಲವುಗಳು ಆಧುನಿಕತೆಯ ಗುರುತುಗಳಂತೆ ಕಾಣುತ್ತವೆ. ಇದರರ್ಥ ಪ್ರಸ್ತುತ ಸಮಾಜವು ಹಳೆಬೇರು ಹೊಸ ಚಿಗುರಿನ ಪ್ರತೀಕವಾಗಿದೆ. ಇದು ಸಹಜವಾಗಿಯೇ ಪ್ರಸ್ತುತ ಸಾಹಿತ್ಯ, ಸಂಗೀತದ ಮೇಲೆ ಪ್ರಭಾವ ಬೀರಿದೆ. ಅದೇ ನವಮೌಖಿಕ ರೂಪದಲ್ಲಿ ಪ್ರತಿಬಿಂಬಿತವಾಗಿದೆ. ಹಳೆಯ ಮತ್ತು ಹೊಸ ಸಂಸ್ಕೃತಿಗಳ ಸಮ್ಮಿಲನವಾಗಿ ಪ್ರಸ್ತುತ ಸಮಾಜದ ನಿರ್ಮಾಣವಾಗದೆ, ಅದರ ನೇರ ಪ್ರಭಾವವೇ ನವಮೌಖಿಕ ಸಾಹಿತ್ಯ ನಿರ್ಮಾಣಕ್ಕೆ ಪ್ರೇರಣೆಯಾಗಿದೆ ಎಂದು ವಿವರವಾಗಿ ಸಾದರಪಡಿಸುವುದೇ ಈ ಲೇಖನದ ಉದ್ದೇಶವಾಗಿದೆ. ಹೇಗೆಂದರೆ ಮೌಖಿಕತೆಯು ಹಳೆಯ ಹಿಂದಿನ ವಿಚಾರಗಳನ್ನು ಬಿಂಬಿಸಿದರೆ ಅವುಗಳನ್ನೇ ಹೋಲುವಂಥ ಸಾಹಿತ್ಯವನ್ನು ಸ್ವಲ್ಪ ಭಿನ್ನವಾಗಿಯೇ ರಚಿಸಿ, ಆಧುನಿಕ ಸಂಪರ್ಕ ಮಾಧ್ಯಮಗಳಾದ ಟಿ.ವಿ, ರೇಡಿಯೋ, ಮೊಬೈಲ್, ಇಂಟರ್‌ನೆಟ್ ಮುಂತಾದವುಗಳ ಮೂಲಕ ಬಿಂಬಿಸಲಾಗುವುದು. ಇವುಗಳೆಲ್ಲ ಆಧುನಿಕ ಕಾಲದ ಪರಿಕರಗಳಾಗಿವೆ. ಅಂದರೆ ಮೌಖಿಕ ಸಂಸ್ಕೃತಿಯು ಆಧುನಿಕತೆಯನ್ನು ಪಡೆದು ನವಮೌಖಿಕವಾಗಿ ಹೊರಹೊಮ್ಮಿದೆ ಎಂಬುದು ಈ ಸಂಶೋಧನೆಯಿಂದ ತೋರಿಸುವ ಸ್ಪಷ್ಟ ವಿಚಾರವಾಗಿದೆ. ಹಳೆಯದು ಮತ್ತು ಹೊಸದು ಸೇರಿಕೊಂಡು ಮತ್ತೊಂದು ರೂಪವಾಗಿ ಮೊದಲಿನ ಎರಡನ್ನು ಮರೆಮಾಚಿ ಬಿಡುತ್ತದೆ. ಮೌಖಿಕ ಜೊತೆ ಆಧುನಿಕ ಮಾಧ್ಯಮಗಳು ಸೇರಿಕೊಂಡು ನವಮೌಖಿಕ ಅರ್ಥವನ್ನು ಪಡೆಯುತ್ತದೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ನವಮೌಖಿಕತೆ ಮೊದಲೆರಡು ಅಂಶಗಳನ್ನು ಮರೆತರೆ ಅದರ ಅಸ್ತಿತ್ವವೇ ಇಲ್ಲದಾಗುವುದು. ಹೀಗೆ ಮೌಖಿಕತೆ ಮತ್ತು ಆಧುನಿಕ ಮಾಧ್ಯಮಗಳು ಮಿಶ್ರಣಗೊಂಡು ನವಮೌಖಿಕ ನಿರ್ಮಾಣವಾಗಿದೆ. ಆದರೆ ಮೌಖಿಕ ಮತ್ತು ಆಧುನಿಕ ಮಾಧ್ಯಮೋಪಕರಣಗಳು ಸ್ವಲ್ಪ ಗೌಣವಾಗಿ ಉಳಿಯುತ್ತವೆ. ನವಮೌಖಿಕ ಎದ್ದು ತೋರುತ್ತದೆ. ನವಮೌಖಿಕ ನಿರ್ಮಾಣದ ನಡೆಯನ್ನು ತೋರಿಸುವುದು ಈ ಲೇಖನದ ಆಶಯಗಳೊಂದಾಗಿದೆ.

## ಮಾಹಿತಿ ತಂತ್ರಜ್ಞಾನ, ಶಿಕ್ಷಣ ಮತ್ತು ಕನ್ನಡ

ಇಂದಿನ ಮಕ್ಕಳೇ ಮುಂದಿನ ಜನಾಂಗ ಎಂಬ ಘೋಷಣೆ ತುಂಬ ಹಳೆಯದು ಮತ್ತು ಕ್ಲೀಷೆಯಾಗಿದೆ. ಆದರೂ ಶಿಕ್ಷಣದಲ್ಲಿ ಗಣಕದ ಬಳಕೆ ಬಗ್ಗೆ ನಾವು ಗಮನ ಹರಿಸಲೇಬೇಕಾಗಿದೆ. ಅದರಲ್ಲೂ ಮುಖ್ಯವಾಗಿ ಕನ್ನಡ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಬಂದಾಗ ಹೇಗೆ ಮಾಹಿತಿ ತಂತ್ರಜ್ಞಾನದ ಬಳಕೆ ಮಾಡಬಹುದು ಎಂಬುದನ್ನು ನೋಡೋಣ. ಈಗೊಂದು ಉದಾಹರಣೆ. ಪುಟ್ಟ ಹುಡುಗಿಯೊಬ್ಬಳು ಗಣಕದ ಪರದೆಯ ಮೇಲೆ ಮೂಡಿಬಂದ ಕನ್ನಡದ "ಅ" ಎಂಬ ಅಕ್ಷರದ ತುಂಡುಗಳನ್ನು ಸರಿಯಾಗಿ ಜೋಡಿಸುತ್ತಿದ್ದಾಳೆ. ಅಕ್ಷರವನ್ನು ಪೂರ್ತಿಯಾಗಿ ಜೋಡಿಸಿದಾಗ ಶಾಬ್ಬಾಸ್ ಎಂಬ ಧ್ವನಿ ಕೇಳಿಬರುತ್ತದೆ. ಈಗ "ಅ" ಅಕ್ಷರದ ಕೆಳಗೆ ಮೂಡಿಬಂದಿರುವ ಸ್ಪೀಕರಿನ ಚಿತ್ರದ ಮೇಲೆ ಮೌಸ್‌ನಿಂದ ಕ್ಲಿಕ್ ಮಾಡಿದಾಗ ಗಣಕದ ಸ್ಪೀಕರಿನಿಂದ "ಅ" ಎನ್ನುವ ಅಕ್ಷರದ ಉಚ್ಚಾರಣೆ ಕೇಳಿಬರುತ್ತದೆ. ಜೊತೆಗೆ "ಅ" ಅಕ್ಷರವನ್ನು ಬರೆಯುವ ರೀತಿಯನ್ನು ಅನಿಮೇಶನ್ ವಿಧಾನದಲ್ಲಿ ಗಣಕದ ಪರದೆಯ ಮೇಲೆ ಮೂಡಿಸಲಾಗಿದೆ. ಪಕ್ಕದಲ್ಲೇ "ಅ" ಅಕ್ಷರದಿಂದ ಆರಂಭವಾಗುವ "ಅಗಸ" ಎನ್ನುವ ಪದ ಮತ್ತು ಅಗಸನ ಚಿತ್ರ ಮೂಡಿ ಬಂದಿವೆ. "ಅಗಸ" ಎನ್ನುವ ಪದದ ಮೇಲೆ ಮೌಸ್‌ನಿಂದ ಕ್ಲಿಕ್ ಮಾಡಿದಾಗ ಗಣಕದ ಸ್ಪೀಕರಿನಿಂದ "ಅಗಸ" ಎನ್ನುವ ಪದದ ಉಚ್ಚಾರ ಕೇಳಿಸುತ್ತದೆ. ನೀವು ಈಗಾಗಲೇ ಗಮನಿಸಿರುವಂತೆ ಆ ಹುಡುಗಿ ಗಣಕದಲ್ಲಿ ಆಟವೊಂದನ್ನು ಆಡುವ ಮೂಲಕ ಕನ್ನಡ ಅಕ್ಷರಗಳನ್ನು ಕಲಿಯುತ್ತಿದ್ದಾಳೆ. ಇಲ್ಲಿ ವಿವರಿಸಿರುವುದು "ಕನ್ನಡ ಕಲಿ" ಎಂಬ ತಂತ್ರಾಂಶ–ಆಟವನ್ನು.

ಭಾರತದ ಬೆಳವಣಿಗೆಗಳಲ್ಲಿ ಮುಖ್ಯವಾದ ಬೆಳವಣಿಗೆ ಎಂದರೆ ತಂತ್ರಜ್ಞಾನದ ಬೆಳವಣಿಗೆ. ತಂತ್ರಜ್ಞಾನ ಎಂದರೆ ಉಪಕರಣಗಳ ಜ್ಞಾನದ, ತಂತ್ರಗಳ, ಯಂತ್ರಗಳ ಸಹಾಯದಿಂದ ಹೊಸ ಸಮಸ್ಯೆಗಳ ಪರಿಹಾರ ಮತ್ತು ಮೊದಲೆ ಅಸ್ತಿತ್ವದಲ್ಲಿರುವ ಪರಿಹಾರಗಳನ್ನು ಸುಧಾರಿಸಿ ಒಂದು ಗುರಿ ಸಾಧಿಸುವುದು. ತಂತ್ರಜ್ಞಾನದಿಂದ ಇಂದು ಅನೇಕ ಕ್ಷೇತ್ರಗಳಲ್ಲಿ ಕಾಣಬಹುದು. ಉದಾಹರಣೆಗೆ ಇಂದು ಶಾಲಾ, ಕಾಲೇಜುಗಳಲ್ಲಿ ಪಾಠ ಮಾಡುವ ರೀತಿ ಬದಲಾಗಿದೆ.

ತಂತ್ರಜ್ಞಾನದ ಬಳಕೆಯಿಂದ ಮಕ್ಕಳಿಗೆ ಪಾಠ ಕಲಿಯಲು ಸುಲಭವಾಗಿದೆ. ತಂತ್ರಜ್ಞಾನ ಬೋಧನೆ ಮತ್ತು ಕಲಿಕೆ ಎರಡನ್ನು ಬೆಂಬಲಿಸಲು ಬಳಸಲಾಗುತ್ತದೆ. ತರಗತಿಗಳಲ್ಲಿ ಕಂಪ್ಯೂಟರ್ ಜೊತೆ ಡಿಜಿಟಲ್ ಕಲಿಕೆಯನ್ನು ಪರಿಚಯಿಸಲಾಗಿದೆ. ಇಂತಹ ಸೌಲಭ್ಯಗಳು ವಿದ್ಯಾರ್ಥಿಗಳ ಭಾಗವಹಿಸುವಿಕೆ ಮತ್ತು ಪ್ರೇರಣೆಯನ್ನು ಹೆಚ್ಚಿಸುತ್ತದೆ. ಆನ್‌ಲೈನ್ ಕಲಿಕೆಯ ತುಂಬಾ ಅವಕಾಶಗಳು ಮತ್ತು ಮುಕ್ತ ಶೈಕ್ಷಣಿಕ ಸಂಪನ್ಮೂಲಗಳು ಮತ್ತು ಇತರ ತಂತ್ರಜ್ಞಾನಗಳ ಬಳಕೆಯಿಂದ ಕಲಿಕೆಯ ಉತ್ಪಾದಕತೆಯನ್ನು ಹೆಚ್ಚಿಸಬಹುದು. ತಂತ್ರಜ್ಞಾನದ ವ್ಯವಸ್ಥೆಯ ಮೂಲಕ ಪುಸ್ತಕಗಳನ್ನು ಖರೀದಿಸುವ ಖರ್ಚುಗಳನ್ನು ಕಡಿಮೆ ಮಾಡುತ್ತದೆ. ತರಗತಿ ಬೋಧನೆಯಲ್ಲಿ ಪಿಪಿಟಿ ಅಳವಡಿಕೆ ; ಸ್ಪಷ್ಟತೆ, ಸಮಯದ ಉಳಿತಾಯ, ಹೆಚ್ಚಿನ ವಿವರಣೆಗೆ ಅವಕಾಶ.

## ಪರಾಮರ್ಶನ ಗ್ರಂಥಗಳು


1. ಗೋವಿಂದರಾಜು ಟಿ., 2016, ಆಧುನಿಕ ಜಾನಪದ ಸ್ವರೂಪ, ಕಾವ್ಯಕಲಾ ಪ್ರಕಾಶನ, ಬೆಂಗಳೂರು.
2. ಅರುಣ್ ಜೋಳದಕೂಡ್ಲಿಗಿ., 2012, ಕನ್ನಡ ಜಾನಪದ ಅಧ್ಯಯನದ ತಾತ್ವಿಕ ನೆಲೆಗಳು, ರೂಪ ಪ್ರಕಾಶನ, ಮೈಸೂರು.
3. ಬಾಳಣ್ಣ ಸೀಗೀಹಳ್ಳಿ(ಸಂ), 2010, ಹಾಡ ತೂರ್‍ಯಾಡ್ಯಾವ, ಲಿಂಗಾಯತ ಅಧ್ಯಯನ ಅಕಾಡೆಮಿ, ನಾಗನೂರು ರುದ್ರಾಕ್ಷಿಮಠ, ಬೆಳಗಾವಿ.
4. ಸಜ್ಜನ್ ಎಂ.ಎನ್., 2014, ವೈವಿಧ್ಯಮಯ ಹಾಡುಗಳು, ಮೆ॥ ಪಿ.ಸಿ. ಶಾಬಾದಿಮಠ ಬುಕ್‌ಡಿಪೋ, ಗದಗ.
5. ವಿಜಯಕುಮಾರ ಎಸ್., 2003, ಜಾನಪದ ಗೀತೆಗಳು, ಮಾರುತಿ ಬುಕ್ ಸೆಂಟರ್, ಗದಗ.


## ಅಂತರ್ಜಾಲದ ಕೊಂಡಿಗಳು (ಇಂಟರ್ನೆಟ್ ಲಿಂಕ್ಸ್)


1. https://avadhimag.in/%e0%b2%95%e0%b2%a8%e0%b3%8d%e0%b2%a8%e0%b2%a1-%e0%b2%ae%e0%b2%a4%e0%b3%8d%e0%b2%a4%e0%b3%81-%e0%b2%ae%e0%b2%be%e0%b2%b9%e0%b2%bf%e0%b2%a4%e0%b2%bf-%e0%b2%a4%e0%b2%82%e0%b2%a4%e0%b3%8d%e0%b2%b0/
2. https://kn.wikipedia.org/wiki/%E0%B2%B8%E0%B2%82%E0%B2%B5%E0%B2%B9%E0%B2%A8
3. https://kn.wikipedia.org/wiki/%E0%B2%A4%E0%B2%82%E0%B2%A4%E0%B3%8D%E0%B2%B0%E0%B2%9C%E0%B3%8D%E0%B2%9E%E0%B2%BE%E0%B2%A8%E0%B2%A6_%E0%B2%89%E0%B2%AA%E0%B2%AF%E0%B3%8B%E0%B2%97%E0%B2%97%E0%B2%B3%E0%B3%81